ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014-15 ದಿನಾಂಕ: 22-09-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಬೆಂಗಳೂರು ಸರ್ಕಾರಿ ವಸ್ತು ಸಂಗ್ರಹಾಲಯದ 150ನೇ ವರ್ಷಾಚರಣೆ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು:<br><br>ಉದ್ಘಾಟನೆ:<br><br>ಶ್ರೀಮತಿ ಉಮಾಶ್ರೀ,<br>ಕನ್ನಡ, ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು<br><br>ಕೈಪಿಡಿ ಬಿಡುಗಡೆ:<br><br>ಶ್ರೀ ರಾಮಲಿಂಗಾ ರೆಡ್ಡಿ,<br>ಸಾರಿಗೆ ಸಚಿವರು.<br><br>ಅಧ್ಯಕ್ಷತೆ:<br><br>ಆರ್. ರೋಷನ್ ಬೇಗ್,<br>ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಹಜ್ ಸಚಿವರು. | 23-09-2015<br>ಬುಧವಾರ<br>ಬೆಳಿಗ್ಗೆ<br>10-00 ಗಂಟೆಗೆ | ವೆಂಕಟಪ್ಪ ಚಿತ್ರಶಾಲೆ, ಕಸ್ತೂರಬಾ ರಸ್ತೆ, ಬೆಂಗಳೂರು. |
| 2. | ಹಿರಿಯ ನಾಗರಿಕರ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆ:<br><br>ಉದ್ಘಾಟನೆ:<br><br>ಶ್ರೀಮತಿ ಉಮಾಶ್ರೀ,<br>ಕನ್ನಡ, ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು | 23-09-2015<br>ಬುಧವಾರ<br>ಬೆಳಿಗ್ಗೆ<br>10-00 ಗಂಟೆಗೆ | ಜವಹಾರ್ ಬಾಲಭವನ,<br>ಕಬ್ಬನ್ ಪಾರ್ಕ್,<br>ಬೆಂಗಳೂರು |

| | | | |
|---|---|---|---|
| 3. | ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಜನ್ಮ ಶತಮಾನೋತ್ಸವ ಆಚರಣೆ ಕಾರ್ಯಕಾರಿ ಸಮಿತಿ ಸಭೆ:<br><br>ಅಧ್ಯಕ್ಷತೆ:<br><br>ಹೆಚ್. ವಿಶ್ವನಾಥ್,<br>ಮಾಜಿ ಸಚಿವರು | 23-09-2015<br>ಬುಧವಾರ<br>ಬೆಳಿಗ್ಗೆ<br>11-00 ಗಂಟೆಗೆ | ನಂ 16/ಡಿ, ಎರಡನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052. |
| 4. | ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷರು , ಪ್ರತಿನಿಧಿಗಳ ಒಂದು ದಿನ ಕಾರ್ಯಾಗಾರ:<br><br>ಉಪಸ್ಥಿತಿ:<br>ಶ್ರೀಮತಿ ಉಮಾಶ್ರೀ,<br>ಕನ್ನಡ, ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು | 23-09-2015<br>ಬುಧವಾರ<br>ಬೆಳಿಗ್ಗೆ<br>11-00 ಗಂಟೆಗೆ | ಕೊಠಡಿ ಸಂಖ್ಯೆ 419,<br>ವಿಕಾಸಸೌಧ,<br>ಬೆಂಗಳೂರು |
| 5. | **Press Conference:**<br><br>**By:**<br><br>**H. Noorahmed,**<br>**President,**<br>**Federation of Indian Mineral Industries.** | 23-09-2015<br>**Wednesday**<br>**at**<br>**12-30 PM** | **Hotel Chancery Pavalion, Residency Road, Bengaluru.** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬಕ್ರೀದ್ :
# ಸಾರ್ವತ್ರಿಕ ರಜೆ ಸೆ. 24 ಅಲ್ಲ, ಸೆ. 25

ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರವು ಸೆಪ್ಟೆಂಬರ್ 24 ರ ಗುರುವಾರ ರಂದು ಬಕ್ರೀದ್ ಹಬ್ಬದ ಪ್ರಯುಕ್ತ ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ ಪ್ರಕಾರ ಘೋಷಿಸಲಾದ ಸಾರ್ವತ್ರಿಕ ರಜೆಯನ್ನು ರದ್ದುಗೊಳಿಸಿದೆ.

ಅದಕ್ಕೆ ಬದಲಾಗಿ 2015 ರ ಸೆಪ್ಟೆಂಬರ್ 25 ರ ಶುಕ್ರವಾರ ಬಕ್ರೀದ್ ಹಬ್ಬದ ಆಚರಣೆ ಸಾರ್ವತ್ರಿಕ ರಜೆಯನ್ನು ನೆಗೋಷಿಯೇಬಲ್ ಇನ್ಸಸ್ಟ್ರುಮೆಂಟ್ಸ್ ಆಕ್ಟ್ ಪ್ರಕಾರ ಘೋಷಿಸಿ ರಾಜ್ಯ ಸರ್ಕಾರವು ಇಂದು (ಸೆಪ್ಟಂಬರ್ 22 ) ಅಧಿಸೂಚನೆ ಹೊರಡಿಸಿದೆ.

ಪಲ್ಲವಿ:ಬಾಬು:ಜಿಪಿಆರ್

# ಬೆಂಗಳೂರು ದೂರದರ್ಶನದ ಸುದ್ದಿ ವಿಭಾಗಕ್ಕೆ ಹಂಗಾಮಿ ನೇಮಕಾತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)**

**ಬೆಂಗಳೂರು ದೂರದರ್ಶನ ಕೇಂದ್ರದ ಪ್ರಾದೇಶಿಕ ಸುದ್ದಿ ವಿಭಾಗ ಈ ಕೆಳಗಿನ ವರ್ಗಗಳಲ್ಲಿ ಹಂಗಾಮಿಯಾಗಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.**

**ಸಹಾಯಕ ಸುದ್ದಿ ಸಂಪಾದಕ,. ನಿರ್ಮಾಪಕ, ಕಾಪಿ ಎಡಿಟರ್, ವರದಿಗಾರ, ಸಹಾಯಕ ಜಾಲತಾಣ ಸಂಪಾದಕ, ಜಾಲತಾಣ ಸಹಾಯಕ, ನಿರ್ಮಾಣ ಸಹಾಯಕ, ಪೋಸ್ಟ್ ಪ್ರೊಡಕ್ಷನ್ ಅಸಿಸ್ಟೆಂಟ್, ವೀಡಿಯೊ ಸಂಪಾದಕ, ಕ್ಯಾಮರಾಮನ್, ಡಾಟಾ ಎಂಟ್ರಿ ಆಪರೇಟರ್, ಸಿ.ಜಿ. ಆಪರೇಟರ್, ಕ್ಯಾಮೆರಾ ಸಹಾಯಕ.**

**ಅರ್ಹತೆ ಮಾನದಂಡ (ಶೈಕ್ಷಣಿಕ ಹಿನ್ನೆಲೆ, ಅನುಭವ ಇತ್ಯಾದಿ) ಹಾಗೂ ಅರ್ಜಿ ನಮೂನೆ www.ddchandana.gov.in ನಲ್ಲಿ ಲಭ್ಯವಿದೆ. ಲಿಖಿತ ಪರೀಕ್ಷೆ/ಸಂದರ್ಶನದ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಕನ್ನಡ ಭಾಷಾಜ್ಞಾನ ಹೊಂದಿರಬೇಕು. ಇಂಗ್ಲೀಷ್, ಹಿಂದಿ ಹಾಗೂ ಕಂಪ್ಯೂಟರ್ ಜ್ಞಾನ ಕೂಡ ಹೊಂದಿದ್ದರೆ ಒಳ್ಳೆಯದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 26-10-2015.**

ಪಲ್ಲವಿ:ಬಾಬು:ಜಿಪಿಆರ್

# ರಿಯಾಯಿತಿ ಕನ್ನಡ ಪುಸ್ತಕ ಮೇಳ

**ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)**

ಮೈಸೂರು ದಸರಾ ಉತ್ಸವದಲ್ಲಿ 2015 ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಆಶ್ರಯದಲ್ಲಿ ಅಕ್ಟೋಬರ್ 14 ರಿಂದ 23 ರವರೆಗೆ ಮೈಸೂರಿನಲ್ಲಿ ದಸರಾ ಕನ್ನಡ ಪುಸ್ತಕ ಮೇಳ-2015 ಅನ್ನು ಏರ್ಪಡಿಸಲಾಗುವುದು. ಈ ಪುಸ್ತಕ ಮೇಳದಲ್ಲಿ ಪ್ರಕಾಶಕರು/ಮಾರಾಟಗಾರರು ಭಾಗವಹಿಸಬಹುದಾಗಿದ್ದು, ಮಳಿಗೆಯೊಂದಕ್ಕೆ ರೂ 1,500/- ಗಳ ಬಾಡಿಗೆ ಹಾಗೂ ರೂ. 1,000/- ಗಳ ಭದ್ರತಾ ಠೇವಣಿ ಡಿ.ಡಿ. ಯನ್ನು ಪ್ರತ್ಯೇಕವಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ಅವರ ಹೆಸರಿನಲ್ಲಿ ಸಲ್ಲಿಸುವುದು.

ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಪ್ರಕಾಶಕರು/ಮಾರಾಟಗಾರರು ನಿಗದಿತ ಅರ್ಜಿ ನಮೂನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ ಜೆ.ಸಿ. ರಸ್ತೆ, ಬೆಂಗಳೂರಿನ ಕಚೇರಿ ಅಥವಾ ಆಯಾ ಜಿಲ್ಲೆಯಲ್ಲಿರುವ ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಗಳಲ್ಲಿ ಅಥವಾ ಪ್ರಾಧಿಕಾರ ವೆಬ್‌ಸೈಟ್‌ನಲ್ಲಿ ಅಂದರೆ ಅರ್ಜಿಯನ್ನು ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಡಿ.ಡಿ. ಯೊಂದಿಗೆ ಅಕ್ಟೋಬರ್ 9 ರಂದು ಸಂಜೆ 5-30 ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ಅವರ ಹೆಸರಿಗೆ ಸಲ್ಲಿಸಲು ಕೋರಿದೆ. ಆದ್ಯತೆಯ ಮೇರೆಗೆ ನಿರ್ಮಿಸಲಾಗುವ 50 ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ : ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002 ದೂ. 080-22484516/22107704 ಅನ್ನು ಸಂಪರ್ಕಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

## ಸಂದರ್ಶನ ಮುಂದೂಡಿಕೆ

ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 25-9-2015 ರಂದು ನಡೆಸಲಿದ್ದ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಮೊರಾರ್ಜಿ ವಸತಿ ಶಾಲೆಗಳ 53 ಪ್ರಾಂಶುಪಾಲರ ಹುದ್ದೆಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿನ 10 ವಾರ್ತಾ ಸಹಾಯಕ ಹುದ್ದೆಗಳ ಸಂದರ್ಶನವನ್ನು ಬಕ್ರೀದ್ ಹಬ್ಬದ ದಿನಾಂಕವನ್ನು ಸರ್ಕಾರವು 25-09-2015 ಕ್ಕೆ ಘೋಷಿಸಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 8, 2015 ರಂದು ನಡೆಸಲಾಗುವುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಪಲ್ಲವಿ:ಬಾಬು:ಜಿಪಿಆರ್

## ಹಿರಿಯ ಪತ್ರಕರ್ತ ಅಲಿ ಹಫೀಜ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ

ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ ) :

ಹಿರಿಯ ಪತ್ರಕರ್ತ ಶ್ರೀ ಅಲಿ ಹಫೀಜ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಉರ್ದು ಪತ್ರಿಕೋದ್ಯಮದ ದಿಗ್ಗಜರಾಗಿದ್ದ ಕೋಲಾರದ ಖಾದ್ರಿಪುರ ಮೂಲದ ಶ್ರೀ ಅಲಿ ಹಫೀಜ್ ಅವರು ಭಾಷಾ ಬಳಕೆಯಲ್ಲಿ ಉತ್ಕೃಷ್ಟತೆ ಕಾಯ್ದುಕೊಂಡು ಡೈಲಿ ಸಾಲಾರ್ ಪತ್ರಿಕೆಯ ಜನಪ್ರಿಯತೆ ಹಾಗೂ ವಿಶ್ವಾಸಾರ್ಹತೆಯನ್ನು ವೃದ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರು. ಸ್ನೇಹ-ಜೀವಿಯಾಗಿ ಎಲ್ಲರೊಡನೆ ಬೆರೆತು ಭಾವೈಕ್ಯತೆ ಮೆರೆಯುತ್ತಿದ್ದರು ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ವಸ್ತುನಿಷ್ಠ ಪತ್ರಿಕೋದ್ಯಮಕ್ಕೆ ಮತ್ತೊಂದು ಹೆಸರಾಗಿದ್ದ ಶ್ರೀ ಅಲಿ ಹಫೀಜ್ ಅವರು ಪತ್ರಿಕೋದ್ಯಮದಲ್ಲಿ ಪಾವಿತ್ರ್ಯತೆಗೆ ಮನ್ನಣೆ ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿದ್ದರು. ಶಿಕ್ಷಣಕ್ಕೆ ಒತ್ತು ನೀಡಬೇಕೆಂಬ ಅಲ್-ಅಮೀನ್ ಚಳುವಳಿಯಲ್ಲಿ ಶ್ರೀ ಅಲಿ ಹಫೀಜ್ ಅವರ ಕೊಡುಗೆ ಸ್ಮರಣಾರ್ಹ ಎಂದು ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಎಂದು ಬಣ್ಣಿಸಿದ್ದಾರೆ.

ಕೆಲಕಾಲ ಅನಾರೋಗ್ಯದಿಂದ ಬಳಲುತ್ತಿದ್ದು, ಇಂದು ನಿಧನರಾದ ಅಲಿ ಹಫೀಜ್ ಅವರಿಗೆ 84 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಎರಡು ಗಂಡು ಮಕ್ಕಳು, ಓರ್ವ ಹೆಣ್ಣು ಮಗಳನ್ನು ಅಗಲಿದ್ದಾರೆ.

ಆರಂಭದಲ್ಲಿ ಕೋಲಾರದ ಖಾದ್ರಿಪುರದಿಂದ ಬಂದು ಬೆಂಗಳೂರಿನ ನಶೆಯೆತ್ ವಾರಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದರು. ನಂತರ ಮೂರು ದಶಕಗಳ ಕಾಲ ಡೈಲಿ ಸಾಲಾರ್ ಉರ್ದು ದಿನಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದರು. ಅಲ್ ಅಮೀನ್ ಚಳುವಳಿ, ಅಮಾನತ್ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸಿದ್ದರು.


*

ಡಿ ಪಿ ಎಂ

<u>ಗಾಂಧೀ ಜಯಂತಿ – ವಾರ್ತಾ ವಿಶೇಷ:</u>

<u>ಜಯತೇ ಜಯತೇ ಜಯತೇ</u>
<u>ಸತ್ಯಮೇವ ಜಯತೇ</u>

# ಬಾಪುವಿನ ನಿರ್ಗಮನ : ಅಂತರಾತ್ಮದ ಕನಸು

**1948** ರ ಜನವರಿ **30.** ಅಂದು ಎಂದಿನಂತೆ ನನ್ನ ದಿನಚರಿ ಸಾಗಿತ್ತು. ಇದ್ದಕ್ಕಿದ್ದಂತೆ ಎದುರು ಬಂದ ವ್ಯಕ್ತಿ ನನಗೆ ಗುಂಡು ಹಾರಿಸಿದ, ಅರ್ಧ ವಿಶ್ವವನ್ನೇ ಆಳುತ್ತಿದ್ದ ಬ್ರಿಟಿಷರೇ ನನ್ನ ಅಹಿಂಸೆ, ಸತ್ಯ, ಶಾಂತಿ ಮಂತ್ರಗಳಿಗೆ ಹೆದರಿರುವಾಗ ಇವನ ಹಿಂಸೆಗೆ ಹೆದರುವವರಾರು ? "ಹೇರಾಮ" ಎನ್ನುತಾ ಕಣ್ಣು ಮುಚ್ಚಿದೆ.

ಕಣ್ಣು ಬಿಟ್ಟು ನೋಡಿದರೆ ನಾನೆಲ್ಲೋ ಮೇಲಿದ್ದೇನೆ. ಸಾವಿರಾರು ಜನ ಸುತ್ತ ನೆರೆದಿರುವುದೂ ನನಗೆ ಕಾಣುತ್ತಿದೆ. ಅಯ್ಯೋ ಇದೇನಿದು "ಗಾಂಧಿ ಅಮರ್ ರಹೇ " ಎನ್ನುತ್ತಾ ' ರಘಪತಿ ರ್‍ಾಘವ ರಾಜಾರಾಮ್' ಎಂದು ಭಜನೆ ಮಾಡುತ್ತಿದ್ದಾರೆ. ನನಗೆ ಎಲ್ಲರೂ ಬಂದು ಹೂವಿನ ಮಾಲೆ ಹಾಕುತ್ತಿದ್ದಾರೆ. ಅಂದರೆ . . . . ಅಂದರೆ . . . .

ಸರಿ , ಆಗಿದ್ದು ಆಗಿಹೋಯಿತು,. ದೇಶ ಸುತ್ತೋಣವೆಂದು ಹೊರಟೆ. ದೇಶದ ಎಲ್ಲಾ ನಗರ ಪಟ್ಟಣ, ಗ್ರಾಮ, ಊರು-ಕೇರಿ ಪೇಟೆ ಎಲ್ಲೆಡೆ ನನ್ನದೇ ಮಾತು. ದು:ಖಿಸುತ್ತಿದ್ದ ಜನ, ನೋವಿನಿಂದ ಗೋಳಿಡುತ್ತಿದ್ದವರು ಎಷ್ಟೋ ಮಂದಿ. ನನ್ನ ಪ್ರಿಯ ಶಿಷ್ಯರು, ಅನುಯಾಯಿಗಳು, ನನ್ನ ತತ್ವಾರಾಧಕರು,

ನನ್ನ ಹಿಂಬಾಲಕರು ತಾತ್ವಿಕವಾಗಿ ವಿರೋಧಿಸಿದರು, ಮಾನಸಿಕ ಹಾಗೂ ದೈಹಿಕವಾಗಿ ನನ್ನೊಂದಿಗೆ ಇದ್ದವರು, ಎಲ್ಲಾ ದೇಶ ಬಾಂಧವರು – ಚಿಂತೆ, ದು:ಖ, ನೋವುಗಳಲ್ಲಿದ್ದಾರೆ.

ದಿನಕಳೆದಂತೆ, ನನ್ನ ಚಿತಾಭಸ್ಮ ದೇಶದ ವಿವಿಧ ನದಿಗಳಲ್ಲಿ ವಿರ್ಸಜಿಸಿದರೂ ಲೆಕ್ಕವಿಲ್ಲದಷ್ಟು ರಸ್ತೆಗಳಿಗೆ ನನ್ನ ಹೆಸರಿಟ್ಟರು, ಕಟ್ಟಡಗಳಿಗೆ ನನ್ನ ನಾಮಕರಣ ಮಾಡಿದರು. ಬಹಳಷ್ಟು ಊರುಗಳಲ್ಲಿ ನನ್ನ ಪುತ್ಥಳಿ ಸ್ಥಾಪಿಸಿದರು. ನನ್ನ ಹೆಸರಿನಲ್ಲಿ ಏನ್ನೆಲ್ಲಾ ನಡೆದವು. ನನ್ನ ಚಿತ್ರಗಳಿರುವ ನೋಟುಗಳ ಚಲಾವಣೆಗೆ ಬಂದವು. ದೇಶ ಬಾಂಧವರ ಮನದಾಳದಲ್ಲಿ ಕುಳಿತಿದ್ದೆ ನಾನು ಮತ್ತು ನನ್ನ ತತ್ವಗಳು ಬೀದಿಗೆ ಬಿದ್ದವು.

ಹೌದು, ನಾನು ಸಾರ್ವಜನಿಕ ಶುಚಿತ್ವಕ್ಕೆ ಕರೆಕೊಟ್ಟೆ.. ಮನ, ಮನೆ, ಊರು–ಕೇರಿ, ಸ್ವಚ್ಛ ಇಡಲು ಹೇಳಿದೆ. ಇದರಿಂದ ನಮ್ಮಗಳ. ಊರಿನ, ದೇಶದ ಅನಾರೋಗ್ಯ ನಿವಾರಣೆಯಾಗುತ್ತದೆ– ಎಂದು ಹೇಳಿದರೆ ಆ ಕೆಲಸಗಳಿಗೆ ನನ್ನ ಅನುಯಾಯಿಗಳಾಗಿದ್ದ ಬಡಜನರನ್ನು ದೂಡಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆಯೇ ವಿನ: ಸ್ವಯಂ ನೈರ್ಮಲ್ಯಕ್ಕೆ ಇಳಿಯಲು ಮನಸ್ಸು ಮಾಡಲೇ ಇಲ್ಲ.

ನನ್ನ ಆಸೆ ಒಂದಿತ್ತು–ಅದು ಸ್ವಯಂ ನೇಯ್ದು, ಶುದ್ಧ ಹತ್ತಿಯಿಂದ ಮಾಡಿದ ಖಾದಿ ಬಟ್ಟೆಗಳನ್ನು ಎಲ್ಲರೂ ತೊಡಬೇಕೆಂಬುದಾಗಿತ್ತು. ಈ ಶುದ್ಧ ಬಟ್ಟೆಗಳನ್ನು ತೊಡುವುದರಿಂದ ಆರೋಗ್ಯ ಮತ್ತು ದೇಹದ ಮೇಲೆ ಯಾವುದೇ ತೊಂದರೆ ಇರುತ್ತಿರಲಿಲ್ಲ. ದೇಹದ ಬೆವರನ್ನು ಹೀರುವಂತಹ ಬಟ್ಟೆಯಾಗಿತ್ತು. ಅಲ್ಲದೆ, ಸ್ವಯಂ ನೇಯ್ಗೆಯಿಂದ ದೇಶದ ಬಟ್ಟೆ ಸಮಸ್ಯೆ ನೀಗಬಹುದಾಗಿತ್ತು. ಅಲ್ಲದೆ, ಗೃಹ ಉದ್ಯಮಗಳನ್ನು ಉತ್ತೇಜಿಸುವುದು ಆಗಿತ್ತು. ಆದರೆ, ಅದು ಕ್ರಮೇಣ ಯಾಂತ್ರಿಕತೆ, ಸಣ್ಣ ಕೈಗಾರಿಕೆಗಳಾಗಿ ಮಾರ್ಪಾಡುತ್ತದೆ ಎಂದು ನಾನು ಎಣಿಸಿರಲಿಲ್ಲ. ಇಂದು ನನ್ನ ಅಕಾಂಕ್ಷೆಯ ಖಾದಿ ಬಟ್ಟೆ ಧರಿಸುವವರು ದೇಶದಲ್ಲಿ ವಿರಳವಾಗಿದ್ದಾರೆ. ಬೆಲೆಯೂ ದುಬಾರಿಯಾಗಿದೆ. ನನ್ನ ಮೇಲಿನ ಪ್ರೀತಿ ಗೌರವಗಳಿಗಾಗಿ ಬೆರಳಣಿಕೆಯ ಮಂದಿ ಇಂದಿಗೂ ನನ್ನ ಬಯಕೆಯ ಖಾದಿ ಬಟ್ಟೆ ತೊಡುತ್ತಿದ್ದರೆ, ನನ್ನ ತತ್ವವನ್ನೇ ಅರಿಯದ ಇಂದಿನ ಯುವ ಜನಾಂಗದ “ ಕೆಲವರು ಶೋಕಿಗಾಗಿ ಖಾದಿ ಬಟ್ಟೆ ತೊಡುತ್ತಿದ್ದಾರೆ.

ನನ್ನ ಪ್ರಿಯ ಮತ್ತೊಂದು ಕಾರ್ಯ “ ಗ್ರಾಮ ಸ್ವರಾಜ್ಯದ” ಕಲ್ಪನೆ. ಸ್ವಾತಂತ್ರ್ಯ ನಂತರ ಇದು ಜಾರಿಯಾಗುತ್ತದೆ ಎಂದು ನಿರೀಕ್ಷೆ ಇಟ್ಟಿದೆ. ಇದನ್ನು ನನ್ನ ಕೆಲವು ಅನುಯಾಯಿಗಳು ಸರ್ಕಾರದ ಮೂಲಕ ಜಾರಿಗೆ ತಂದರು. ಆದರೆ ಆದದ್ದೇನು, ನನ್ನ ಉದ್ದೇಶ ಮರೆತ ಬಹಳಷ್ಟು ಕಡೆಗಳಲ್ಲಿ ಗ್ರಾಮ ಸ್ವರಾಜ್ಯ ಹೋಗಿ. ಗ್ರಾಮ ಭ್ರಷ್ಟಚಾರ ನಡೆಯುತ್ತಿದೆ. ಇಂದು ದೇಶದಲ್ಲಿ ನಿಮ್ಮ ಬಾಪುವಿನ ಕನಸನ್ನು ನನಸಾಗಿಸುವ ಬದಲು ಶಾಶ್ವತ ಕನಸಾಗಿಯೇ ಮಾಡಲು ಕೆಲವರು ಹವಣಿಸುತ್ತಿದ್ದಾರೆ.

ರಸ್ತೆ, ಕಟ್ಟಡಗಳು, ಯೋಜನೆಗಳಿಗೆ ನನ್ನ ನಾಮಕರಣ ಮಾಡುವ ಬದಲು ನನ್ನ ಆಸೆಯ ಸತ್ಯ, ಅಹಿಂಸೆ, ಶಾಂತಿ, ನೈರ್ಮಲ್ಯ, ಖಾದಿ ಗ್ರಾಮೋದ್ಯೋಗಗಳಿಗೆ ಒತ್ತುಕೊಡಿ. ಕೆಲವೆಡೆ ಮಾತ್ರ ಇರುವ ಗ್ರಾಮಾಡಳಿತ, ದೇಶದ ಎಲ್ಲೆಡೆ ಬರಲಿ. “ಬಾಪು ಅಮರ್ ರಹೇ” ಎಂದು ಹೇಳುವ ಬದಲು

ಬಾಪುವಿನ ತತ್ವ ಸಿದ್ಧಾಂತ ಆಚರಣೆಮಾಡುವ ಮೂಲಕ ಅವುಗಳನ್ನು ಅಮರ ಮಾಡಿ. ಅಳಿದುಳಿದಿರುವ ನನ್ನ ಪ್ರೀತಿಯ ತ್ಯಾಗಜೀವಿ ಅನುಯಾಯಿಗಳು ಇಂದು ನನ್ನನ್ನು ಮರೆತ್ತಿರುವ ಯುವ ಜನಾಂಗವನ್ನು ಎಚ್ಚರಿಸುವ ಪ್ರಯತ್ನ ಮಾಡಿ, ನನ್ನ ಜನ್ಮ ದಿನದ ಬದಲು ವರ್ಷವಿಡೀ ನನ್ನ ತತ್ವ ಆಚರಿಸಿದರೆ ಅದೇ ನನಗೆ ಖುಷಿ.

"ಉಳಿಸಿಕೊಳ್ಳಿ ಹಿರಿಯ ನಡತೆ, ಗಳಿಸಿಕೊಳ್ಳಿ ಮಾನ್ಯತೆ . . ಸತ್ಯವಾದ ಘನತೆ ಸೋಲೇ ಕಾಣದಂತೆ."

ಇಂತಿ ತಮ್ಮ ಪ್ರೀತಿಯ

– ಮೋಹನದಾಸ ಕೆ. ಗಾಂಧಿ

ಬರಹ: ಮಂಜುನಾಥ ಬಾಬು ಟಿ.ಸಿ.
ಸಹಾಯಕ ನಿರ್ದೇಶಕರು